ಕಂ/ಉಪಲೋಕ್/ಬಿಡಿ/1321/2021
ಪಿ.ಓ.ಎ.ಆರ್.ಇ-5

**ಕರ್ನಾಟಕ ಲೋಕಾಯುಕ್ತ**

ಕಂಪ್ಲೆಂಟ್/ಉಪಲೋಕ್/ಬಿಡಿ/1321/2021/ಪಿಓ.ಎ.ಆರ್.ಇ-5

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 16/02/2022.

**ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರ ಅನ್ವಯ ವರದಿ**

**ವಿಷಯ: ಶ್ರೀ. ಟಿ.ಸಿ.ಶಿವಪ್ರಕಾಶ್ ಬಿನ್ ಚಂದ್ರಶೇಖರ್, ಗ್ರಾಮಲೆಕ್ಕಾಧಿಕಾರಿ, ಬಿದರಕೆರೆ ವೃತ್ತ, ಕಸಬಾ ಹೋಬಳಿ, ಶಿರಾ ತಾಲ್ಲೂಕು, ಇವರು ಸರ್ಕಾರಿ ನೌಕರರಾಗಿ ಕೆಲಸ ನಿರ್ವಹಿಸುವ ಕಾಲಕ್ಕೆ ದುರ್ನಡತೆ ಎಸಗಿರುವ ಕುರಿತಂತೆ ಶಿಸ್ತು ನಡವಳಿ ಜರುಗಿಸುವ ಬಗ್ಗೆ.**

****

1. ಆರಕ್ಷಕ ನಿರೀಕ್ಷಕರು ಭ್ರಷ್ಟಾಚಾರ ನಿಗ್ರಹದಳ ಪೋಲಿಸ್ ಠಾಣೆ ತುಮಕೂರು (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಇವರು ಸಲ್ಲಿಸಿದ ತನಿಖಾ ವರದಿ ಮತ್ತು ದಾಖಲೆಗಳನ್ನು ಪರಿಶೀಲಸಲಾಗಿ. **ಶ್ರೀ. ಟಿ.ಸಿ.ಶಿವಪ್ರಕಾಶ್ ಬಿನ್ ಚಂದ್ರಶೇಖರ್, ಗ್ರಾಮಲೆಕ್ಕಾಧಿಕಾರಿ, ಬಿದರಕೆರೆ ವೃತ್ತ, ಕಸಬಾ ಹೋಬಳಿ, ಶಿರಾ ತಾಲ್ಲೂಕು** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ **ಶ್ರೀ. ಹನುಮಂತರಾಯಪ್ಪ ಬಿನ್ ಲೇಟ್ ರಂಗಣ್ಣ, ಗೋವಿಂದನಹಳ್ಳಿ ಗ್ರಾಮ, ಶಿರಾ ತಾಲ್ಲೂಕು** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ದೂರು ಸಲ್ಲಿಸಿದ್ದು, ಸದರಿ ದೂರಿನಲ್ಲಿ ಚಿಕ್ಕನಕೋಟೆ ಗ್ರಾಮದ ಸರ್ವೆ ನಂ.101 ವಿಸ್ತೀರ್ಣ 4 ಎಕರೆ 12 ಗುಂಟೆ ಎಂಬುದಾಗಿ ಮ್ಯುಟೇಶನ್‌ದಲ್ಲಿ ನಮೂದಿದ್ದು, ಆದರೆ ಪಹಣಿಯಲ್ಲಿ 4 ಎಕರೆ 16 ಗುಂಟೆ ನಮೂದಾಗಿದ್ದು, ಅದನ್ನು ಸರಿಪಡಿಸಲು ಎದುರುದಾರರು 10,000/-ರೂ. ಲಂಚದ ಹಣಕ್ಕಾಗಿ ಬೇಡಿಕೆಯಿಟ್ಟು ದುರ್ನಡತೆ ತೋರಿಸಿದ ಬಗ್ಗೆ ಬರೆದುಕೊಂಡಿದ್ದು ಸದರಿ ದೂರು ತುಮಕೂರು ಎ.ಸಿ.ಬಿ ಪೋಲಿಸ್ ಠಾಣಾ ಗುನ್ನಾ ನಂ. 15/2018 ರಲ್ಲಿ ದಾಖಲಾಗಿದ್ದು, ತನಿಖಾಧಿಕಾರಿಗಳು ತನಿಖೆಯನ್ನು ಪೂರೈಸಿ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ ಕಲಂ 7(ಎ) ಅಡಿಯಲ್ಲಿ ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ದೋಷರೋಪಣ ಪಟ್ಟಿಯನ್ನು ಪರಿಶೀಲಿಸಲಾಗಿ ಎದುರುದಾರರು ಸರ್ಕಾರಿ ನೌಕರರಾಗಿ ಕರ್ತವ್ಯ ನಿರ್ವಹಿಸುವ ಕಾಲಕ್ಕೆ 4,000/-

ರೂ. ಲಂಚ ಪಡೆದು ರೆಡ್‌ಹ್ಯಾಂಡಾಗಿ ಸಿಕ್ಕು ದುರ್ನಡತೆ ತೋರಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು-02 ಇವರು ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತಾರೆ.

2. **ಪ್ರಕರಣದ ಸಂಕ್ಷಿಪ್ತ ಸಾರಾಂಶ:** ದೂರುದಾರರಾದ **ಶ್ರೀ. ಹನುಮಂತರಾಯಪ್ಪ ಬಿನ್ ಲೇಟ್ ರಂಗಣ್ಣ, ಗೋವಿಂದನಹಳ್ಳಿ ಗ್ರಾಮ, ಶಿರಾ ತಾಲ್ಲೂಕು** ಇವರು ದೂರಿನಲ್ಲಿ ಬರೆದುಕೊಂಡ ಅಂಶವೇನೆಂದರೆ ಚಿಕ್ಕನಕೋಟೆ ಗ್ರಾಮದ ಸರ್ವೆ ನಂ.101 ವಿಸ್ತೀರ್ಣ 4 ಎಕರೆ 12 ಗುಂಟೆ ಎಂಬುದಾಗಿ ಮ್ಯುಟೇಶನ್‌ದಲ್ಲಿ ನಮೂದಿದ್ದು, ಆದರೆ ಪಹಣಿಯಲ್ಲಿ 4 ಎಕರೆ 16 ಗುಂಟೆ ನಮೂದಾಗಿದ್ದು, ಅದನ್ನು ಸರಿಪಡಿಸಲು ಶಿರಾ ತಾಲ್ಲೂಕು ಕಛೇರಿಗೆ ಈ ದೂರು ಸಲ್ಲಿಸುವುದಕ್ಕಿಂತ ಎರಡು ತಿಂಗಳ ಮೊದಲು ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿ ಕುರಿತಂತೆ ಎದುರುದಾರರನ್ನು ವಿಚಾರಿಸಿದಾಗ ಬೇಗನೆ ಕಳುಹಿಸಲು ಎದುರುದಾರರು 10,000/- ರೂ. ಲಂಚಕ್ಕೆ ಬೇಡಿಕೆ ಇಟ್ಟಿರುತ್ತಾರೆ. ದಿ: 10/10/2018 ರಂದು ದೂರುದಾರರು ಎದುರುದಾರರಿಗೆ ಕಡತದ ಬಗ್ಗೆ ವಿಚಾರಿಸಲು ಫೋನ್ ಮಾಡಿದಾಗ ಎದುರುದಾರರು ತಾನು ಈಗಾಗಲೇ 1,000/- ರೂ. ಲಂಚ ಪಡೆದುಕೊಂಡಿದ್ದು, ಪುನ: 4,000/- ರೂ. ಲಂಚದ ಹಣಕ್ಕೆ ಬೇಡಿಕೆ ಇಟ್ಟಿದ್ದನ್ನು ದೂರುದಾರರು ತಮ್ಮ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ.

3. ದೂರುದಾರರಿಗೆ ಲಂಚ ನೀಡಲು ಮನಸ್ಸಿಲ್ಲವಾದ್ದರಿಂದ ದಿ: 11/10/2018 ರಂದು ತುಮಕೂರು ಎಸಿಬಿ ಪೋಲಿಸ್ ಠಾಣೆಗೆ ಹೋಗಿ ದೂರು ಸಲ್ಲಿಸಿದ್ದು, ಸದರಿ ದೂರು ಠಾಣಾ ಗುನ್ನಾ ನಂ.15/2018 ರಲ್ಲಿ ಕಲಂ 7(ಎ) ಭ್ರಷ್ಟಾಚಾರ ನಿಗ್ರಹ ಕಾಯ್ದೆಯಡಿಯಲ್ಲಿ ಪ್ರಕರಣವು ದಾಖಲಾಗಿರುತ್ತದೆ. ಪ್ರಕರಣವು ದಾಖಲಾದ ನಂತರ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ 1) ಪರಾಹ್ನ ಅಹಮ್ಮದ್ (ನೆರಳುಸಾಕ್ಷಿ), 2) ನಾಗರಾಜು ಟಿ.ಹೆಚ್. ಇವರುಗಳನ್ನು ಬರಮಾಡಿಕೊಂಡಿದ್ದು, ಸದರಿಯವರುಗಳ ಸಮಕ್ಷಮ ದೂರುದಾರರು ತಮ್ಮ ಮೊಬೈಲ್‌ನಲ್ಲಿದ್ದ ಮೆಮೊರಿ ಕಾರ್ಡನ್ನು ಹಾಜರುಪಡಿಸಿದ್ದು, ಮೆಮೊರಿ ಕಾರ್ಡಿನಲ್ಲಿದ್ದ ಸಂಭಾಷಣೆಯನ್ನು ಲಿಪಿಕರಿಸಿಕೊಂಡು ಸಿ.ಡಿ.ಗಳಿಗೆ ವರ್ಗಾಯಿಸಿಕೊಂಡು, ಮೆಮೊರಿ ಕಾರ್ಡನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಸದರಿ ಸಂಭಾಷಣೆಯನ್ನು ಪಂಚರಿಗೆ ಕೇಳಿಸಲಾಗಿ, ಎದುರುದಾರರು ಲಂಚಕ್ಕಾಗಿ ಬೇಡಿಕೆಯಿಟ್ಟಿರುವುದು ಕಂಡು ಬರುತ್ತದೆ.

ಲಂಚ ನೀಡಲು ತಂದ ರೂ. 4,000/- (500X8) ಗಳನ್ನು ದೂರುದಾರರು ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿದ್ದು, ಸದರಿ ನೋಟುಗಳ ನಂಬರುಗಳನ್ನು ಪಂಚರು ಬರೆದುಕೊಂಡಿರುತ್ತಾರೆ. ಪೋಲೀಸ್ ಸಿಬ್ಬಂದಿ ನೋಟುಗಳಿಗೆ ಫಿನಾಪ್ತಲಿನ್ ಪೌಡರನ್ನು ಸವರಿ ಸದರಿ ಹಣವನ್ನು ಪಂಚಸಾಕ್ಷಿ-2 ನಾಗರಾಜು ರವರ ಮೂಲಕ ದೂರುದಾರರ ಶರ್ಟ್‌ಜೇಬಿನಲ್ಲಿ ಇಡಿಸಿರುತ್ತಾರೆ. ನಂತರ ನಾಗರಾಜುರವರ ಎರಡೂ ಕೈಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆಯಲಾಗಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಫಿನಾಪ್ತಲಿನ್ ಪೌಡರಿನ ಗುಣಧರ್ಮವನ್ನು ದೂರುದಾರರು ಹಾಗೂ ಪಂಚರಿಗೆ ಮನವರಿಕೆ ಮಾಡಿಕೊಟ್ಟಿರುತ್ತಾರೆ. ನೆರಳುಸಾಕ್ಷಿಯಾದ ಪರಾಹ್ನ ಅಹಮ್ಮದ್ ಇವರಿಗೆ ದೂರುದಾರರೊಂದಿಗೆ ಹೋಗಿ ಲಂಚವನ್ನು ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆ ಹಾಗೂ ವಿದ್ಯಮಾನಗಳನ್ನು ಗಮನಿಸಬೇಕು ಎಂದು ಸೂಚನೆ ನೀಡಿರುತ್ತಾರೆ. ಎದುರುದಾರರು ಲಂಚದ ಹಣವನ್ನು ಕೇಳಿದಾಗ ಮಾತ್ರ ಕೊಡುವಂತೆ ಮತ್ತು ಹಣ ಪಡೆದುಕೊಂಡ ನಂತರ ಕೈಯಿಂದ ತಲೆ ಒರೆಸಿಕೊಳ್ಳುವ ಮೂಲಕ ಸಂಜ್ಞೆ ನೀಡಬೇಕೆಂದು ತಿಳಿಸಿರುತ್ತಾರೆ. ದೂರುದಾರರಿಗೆ ವಾಯ್ಸ್ ರೆಕಾರ್ಡರನ್ನು ನೀಡಿ ಲಂಚ ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಳ್ಳಲು ತಿಳಿಸಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ದಿ: 11-10-2018 ರಂದು ಮಧ್ಯಾಹ್ನ 12 ರಿಂದ 1 ಘಂಟೆಯವರೆಗೆ ತುಮಕೂರು ಎಸಿಬಿ ಕಛೇರಿಯಲ್ಲಿ ಬರೆದ ಪ್ರಯೋಗಿಕ ಪಂಚನಾಮೆಯಲ್ಲಿ ದಾಖಲಿಸಿರುತ್ತಾರೆ.

4. ಪ್ರಾಯೋಗಿಕ ಪಂಚನಾಮೆ ಮುಗಿದ ನಂತರ ದಾಳಿ ತಂಡದವರು, ತುಮಕೂರನ್ನು ಬಿಟ್ಟು ಮಧ್ಯಾಹ್ನ 2.45 ಘಂಟೆಗೆ ಶಿರಾ ನಗರದ ಕಸಬಾ ಹೋಬಳಿಯ ಕಂದಾಯ ನಿರೀಕ್ಷಕರ ಕಛೇರಿಗೆ ಸ್ವಲ್ಪ ದೂರದಲ್ಲಿ ವಾಹನವನ್ನು ನಿಲ್ಲಿಸಿ, ದೂರುದಾರರನ್ನು ಹಾಗೂ ನೆರಳುಸಾಕ್ಷಿಯನ್ನು ಎದುರುದಾರರು ಕೆಲಸ ಮಾಡುವ ಕಛೇರಿಯ ಒಳಗೆ ಕಳುಹಿಸಿ, ದಾಳಿ ತಂಡದವರು ಗೌಪ್ಯವಾಗಿ ಅಲ್ಲಲ್ಲಿ ಕಾರ್ಯಾಲಯದ ಹತ್ತಿರ ಸಂಶಯಬರದಂತೆ ನಿಂತಿರುತ್ತಾರೆ. ಎದುರುದಾರರು ಊಟಕ್ಕೆ ಹೋಗಿ ಬರುವುದಾಗಿ ಹೇಳಿ ಹೊರಗಡೆ ಹೋಗಿದ್ದು, ಸಾಯಂಕಾಲವಾದರೂ ಬರಲಿಲ್ಲವಾದ್ದರಿಂದ ಎದುರುದಾರರಿಗೆ ಫೋನ್ ಮಾಡಲಾಗಿ ತನ್ನ ನಾದಿನಿಗೆ ಹುಷಾರಿಲ್ಲವಾದ್ದರಿಂದ, ತಾನು ಊರಿಗೆ ಹೋಗಿರುವುದಾಗಿ ತಿಳಿಸಿರುತ್ತಾರೆ. ಪುನ: ದಿ: 12/10/2018 ರಂದು ದಾಳಿತಂಡದವರು ಕಸಬಾ ಹೋಬಳಿಯ ಕಂದಾಯ ನಿರೀಕ್ಷಕರ ಕಛೇರಿ ಹತ್ತಿರ

ಬಂದಿದ್ದು, ಅಂದು ಎದುರುದಾರರು ಕಛೇರಿಗೆ ಬಂದಿಲ್ಲವಾದ್ದರಿಂದ, ಟ್ರ್ಯಾಪ್ ಮಾಡಲು ಸಾಧ್ಯವಾಗಿರುವುದಿಲ್ಲ. ಪುನ: ದಿ: 15/10/2018 ರಂದು ಬೆಳಿಗ್ಗೆ 11.30ಕ್ಕೆ ಶಿರಾದಲ್ಲಿರುವ ಕಸಬಾ ಹೋಬಳಿಯ ಕಂದಾಯ ನಿರೀಕ್ಷಕರ ಕಛೇರಿಯ ಹತ್ತಿರ ಬಂದು, ಸ್ವಲ್ಪ ದೂರದಲ್ಲಿ ವಾಹನವನ್ನು ನಿಲ್ಲಿಸಿ, ಕಛೇರಿಯ ಹೊರಭಾಗದಲ್ಲಿ ಗುಪ್ತವಾಗಿ ದಾಳಿತಂಡದವರು ನಿಂತಿದ್ದು, ದೂರುದಾರರು ಹಾಗೂ ನೆರಳುಸಾಕ್ಷಿದಾರರು ಎದುರುದಾರರು ಕೆಲಸ ಮಾಡುವ ಕಛೇರಿಯ ಒಳಗೆ ಹೋಗಿದ್ದು, ಸುಮಾರು 11.40 ಘಂಟೆಗೆ ಸಂಜ್ಞೆ ನೀಡಿರುತ್ತಾರೆ. ತಕ್ಷಣ ದಾಳಿತಂಡದವರು ಎದುರುದಾರರ ಕಾರ್ಯಾಲಯಕ್ಕೆ ಬಂದು, ತಮ್ಮ ಪರಿಚಯ ಮಾಡಿಕೊಂಡು ತನಿಖೆಗೆ ಸಹಕರಿಸುವಂತೆ ಎದುರುದಾರರಿಗೆ ತಿಳಿಸಿರುತ್ತಾರೆ. ಎದುರುದಾರರ ಎರಡೂ ಕೈಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆಯಲಾಗಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಹಣದ ಬಗ್ಗೆ ದೂರುದಾರರನ್ನು ವಿಚಾರಿಸಲಾಗಿ, ಎದುರುದಾರರು ಹಣವನ್ನು ಪಡೆದುಕೊಂಡು ಎರಡೂ ಕೈಗಳಿಂದ ಎಣಿಸಿದ್ದು, ನೆರಳುಸಾಕ್ಷಿಯನ್ನು ನೋಡಿ ಅನುಮಾನ ಬಂದಿದ್ದರಿಂದ ಹಣವನ್ನು ಟೇಬಲ್ ಕೆಳಗೆ ಚೆಲ್ಲಿರುತ್ತಾರೆಂದು ನುಡಿದಿರುತ್ತಾರೆ. ಪಂಚರಿಗೆ ಸದರಿ ನೋಟುಗಳನ್ನು ತೆಗೆದುಕೊಂಡು ತಾಳೆ ಮಾಡಿ ನೋಡಲು ತಿಳಿಸಿದ್ದು, ಪಂಚರು ತಾವು ಈ ಮೊದಲು ದಾಖಲಿಸಿಕೊಂಡ ನೋಟುಗಳ ನಂಬರುಗಳೊಂದಿಗೆ ತಾಳೆ ಮಾಡಿ ಖಾತರಿ ಪಡಿಸಿಕೊಂಡ ಮೇರೆಗೆ ಹಣವನ್ನು ತನಿಖಾಧಿಕಾರಿಯವರು ಅಮಾನತ್ತು ಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಗಳು ಎದುರುದಾರರಿಂದ ರಕ್ಷಣಾತ್ಮಕ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಮುಂದುವರೆದು ತನಿಖಾಧಿಕಾರಿಗಳು ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳ ಬಗ್ಗೆ ಎದುರುದಾರರನ್ನು ವಿಚಾರಿಸಲಾಗಿ ದಿ: 12/10/2018 ರಂದು ತಾಲ್ಲೂಕು ಕಛೇರಿಗೆ ಕಳುಹಿಸಿರುವುದಾಗಿ ನುಡಿದಿರುತ್ತಾರೆ. ಕಂದಾಯ ನಿರೀಕ್ಷಕರಾದ ಬಿ.ಎಂ.ಮಂಜುನಾಥ್ ಇವರು ದಾಖಲೆಗಳನ್ನು ಹಾಜರುಪಡಿಸಿದ್ದು, ಸದರಿ ದಾಖಲೆಗಳನ್ನು ತಹಶೀಲ್ದಾರ್‌ರವರಿಂದ ದೃಢೀಕರಿಸಿ ಪಡೆದುಕೊಂಡಿರುತ್ತಾರೆ. ಕಂದಾಯ ನಿರೀಕ್ಷಕರಾದ ಮಂಜುನಾಥ್‌ರವರಿಗೆ ಸಂಭಾಷಣೆಯನ್ನು ಕೇಳಿಸಲಾಗಿ, ಸದರಿಯವರು ಎದುರುದಾರರ ಧ್ವನಿಯನ್ನು ಗುರುತಿಸಿರುತ್ತಾರೆ. ವಾಯ್ಸ್ ರೆಕಾರ್ಡರ್ ಬಗ್ಗೆ ದೂರುದಾರರನ್ನು ವಿಚಾರಿಸಲಾಗಿ ತಾನು ಆನ್ ಮಾಡಿಕೊಂಡಿರಲಿಲ್ಲವೆಂದು ಹೇಳಿರುತ್ತಾರೆ. ತನಿಖಾಧಿಕಾರಿಗಳು ಎದುರುದಾರರ ಹಾಗೂ ದೂರುದಾರರ ಮಾದರಿ ಧ್ವನಿಯನ್ನು ಪಡೆದುಕೊಂಡು ಡಿ.ವಿ.ಡಿ.ಗೆ

ವರ್ಗಾಯಿಸಿಕೊಂಡಿರುತ್ತಾರೆ. ಈ ಎಲ್ಲಾ ಪ್ರಕ್ರಿಯೆಗಳನ್ನು ತನಿಖಾಧಿಕಾರಿಗಳು ದಿ: 15/10/2018 ರಂದು ಬೆಳಿಗ್ಗೆ 11.45 ರಿಂದ ಸಾಯಂಕಾಲ 4.15 ಗಂಟೆಯವರೆಗೆ ಶಿರಾನಗರದ ಕಂದಾಯ ನಿರೀಕ್ಷಕರವರ ಕಛೇರಿಯಲ್ಲಿ ಬರೆದ ಟ್ರ್ಯಾಪ್ ಮಹಜರ್‌ನಲ್ಲಿ ದಾಖಲಿಸಿರುತ್ತಾರೆ.

5. ತನಿಖಾ ಕಾಲದಲ್ಲಿ ಎದುರುದಾರರ ಎರಡೂ ಕೈಗಳನ್ನು ತೊಳೆದ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಫಿನಾಪ್ತಲಿನ್ ಅಂಶ ಪತ್ತೆ ಆಗಿರುವುದು ರಾಸಾಯನಿಕ ಪರೀಕ್ಷಾ ವರದಿಯಿಂದ ಕಂಡುಬರುತ್ತದೆ.

6. ತನಿಖಾಧಿಕಾರಿಗಳು ಪ್ರಕರಣಕ್ಕೆ ಸಂಬಂಧಿಸಿದ ಪ್ರಮುಖ ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ. ಎದುರುದಾರರನ್ನು ಅಂದೇ ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ. ಎದುರುದಾರರನ್ನು ಸೇವೆಯಿಂದ ವಜಾ ಮಾಡಲು ಅಧಿಕಾರಹೊಂದಿದ ಪ್ರಾಧಿಕಾರದಿಂದ ಸದರಿಯವರನ್ನು ಅಭಿಯೋಜನೆಗೊಳಿಸಲು ಮಂಜೂರಾತಿ ಆದೇಶ ಪಡೆದುಕೊಂಡಿರುತ್ತಾರೆ.

7. ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ಸಲ್ಲಿಸಿದ ಸಮಜಾಯಿಷಿಯು ಈ ಕಚೇರಿಗೆ ದಿ: 11/11/2021 ರಂದು ತಲುಪಿದ್ದು, ಸದರಿಯವರು ತಮ್ಮ ಸಮಜಾಷಿಯಲ್ಲಿ ಬರೆದುಕೊಂಡ ಅಂಶವೇನೆಂದರೆ, ತಾನು ದೂರುದಾರರ ಕೆಲಸ ಮಾಡಿಕೊಡಲು ಆತನಿಂದ ಯಾವುದೇ ಹಣವನ್ನು ಕೇಳಿರುವುದಿಲ್ಲ ಮತ್ತು ಪಡೆದುಕೊಂಡಿರುವುದಿಲ್ಲ ಮತ್ತು ಆತನೊಂದಿಗೆ ಫೋನ್‌ನಲ್ಲಿ ಮಾತನಾಡಿರುವುದಿಲ್ಲ. ದೂರುದಾರರು ಸಲ್ಲಿಸಿದ ಸುಳ್ಳು ದೂರಿನ ಮೇಲೆ ತುಮಕೂರಿನ ಎ.ಸಿ.ಬಿ ಪೊಲೀಸ್‌ರು ತಮ್ಮ ಠಾಣಾ ಸಿ.ಆರ್.ನಂ: 15/2018 ರಲ್ಲಿ ಪ್ರಕರಣವನ್ನು ದಾಖಲಿಸಿರುತ್ತಾರೆ. ಪೊಲೀಸ್‌ರು ತನಗೆ ಆಗದವರ ಚಿತಾವಣೆಯಿಂದ ಸುಳ್ಳು ಮಹಜರ್‌ನ್ನು ಸೃಷ್ಟಿಸಿರುತ್ತಾರೆ. ತಾನು ಹಣವನ್ನು ಪಡೆದುಕೊಂಡು ಎರಡು ಕೈಗಳಿಂದ ಏಣಿಸಿ, ನೆರಳುಸಾಕ್ಷಿಯನ್ನು ನೋಡಿ ಹಣವನ್ನು ಟೇಬಲ್ ಕೆಳಗೆ ಚೆಲ್ಲಿರುವುದು ಮತ್ತು ಪೊಲೀಸ್‌ರು ಮಹಜರ್ ಕ್ರಮ ಜರುಗಿಸಿರುವುದು ಮತ್ತು ಕಂದಾಯ ನಿರೀಕ್ಷಕರಾದ ಮಂಜುನಾಥ್‌ರವರು ನನ್ನ ಧ್ವನಿಯನ್ನು ಗುರ್ತಿಸಿರುವುದು ಸತ್ಯಕ್ಕೆ ದೂರವಾಗಿರುತ್ತದೆ. ನನ್ನ ಎರಡು ಕೈಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆದಾಗ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ ಎನ್ನುವುದು ಮತ್ತು ಅದನ್ನು ಪ್ರಯೋಗಾಲಯಕ್ಕೆ ಕಳುಹಿಸಿರುವುದು ಸತ್ಯಕ್ಕೆ ದೂರವಾಗಿರುತ್ತದೆ. ತಾನು ಕೆ.ಸಿ.ಎಸ್.ಆರ್. ನಡತೆ ನಿಯಮಗಳನ್ನು ಉಲ್ಲಂಘಿಸಿರುವುದಿಲ್ಲ. ದಿ: 15/10/2018 ರಂದು ದೂರುದಾರರ ಯಾವುದೇ ಕೆಲಸ ತನ್ನ ಹತ್ತಿರ

ಬಾಕಿಯಿರಲಿಲ್ಲ ಮತ್ತು ದೂರುದಾರರ ಕಡತವನ್ನು 10/10/2018 ರಂದೇ ಕಂದಾಯ ನಿರೀಕ್ಷಕರಿಗೆ ಕಳುಹಿಸಲಾಗಿರುತ್ತದೆ. ತಾನು ಕಚೇರಿಯ ಮುಂಭಾಗದಲ್ಲಿರುವ ಟೀ ಅಂಗಡಿ ಹತ್ತಿರ ಟೀ ಕುಡಿಯುತ್ತಿದ್ದಾಗ, ದೂರುದಾರರು ಒಮ್ಮೆಲೆ ಹಣ ನೀಡಲು ಪ್ರಯತ್ನ ಮಾಡಿದ್ದು, ತಾನು ಅದನ್ನು ನಿರಾಕರಿಸಿ ಕಡತವನ್ನು 10/10/2018 ರಂದು ಕಂದಾಯ ನಿರೀಕ್ಷಕರಿಗೆ ಕಳುಹಿಸಲಾಗಿದೆ ಎಂದು ಹೇಳುವಷ್ಟರಲ್ಲಿ, ಎ.ಸಿ.ಬಿ ಪೋಲೀಸ್‌ರು ತನ್ನನ್ನು ಕಂದಾಯ ನಿರೀಕ್ಷಕರ ಕಚೇರಿಗೆ ಕರೆ ತಂದು, ಪುನ: 10 ನಿಮಿಷದಲ್ಲಿ ತನ್ನ ಕಚೇರಿಗೆ ಕರೆದುಕೊಂಡು ಬಂದು, ತನ್ನನ್ನು ಕುರ್ಚಿಯ ಮೇಲೆ ಕೂಡಲು ಹೇಳಿ, ಹಣವನ್ನು ನನ್ನ ಟೇಬಲ್ ಕೆಳಗೆ ನನಗೆ ತಿಳಿಯದಂತೆ ಹಾಕಿರುತ್ತಾರೆ. ನನ್ನ ಕೈ ತೊಳೆಯಲಾಗಿ, ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುವುದಿಲ್ಲ. ದೂರುದಾರರು ಹೇಳಿರುವಂತೆ ತಾನು ಯಾವುದೇ ತಪ್ಪು ಮಾಡಿರುವುದಿಲ್ಲ. ತನ್ನ ಮೇಲೆ ಸುಳ್ಳು ಪ್ರರಕಣ ದಾಖಲಿಸಿ, ಸುಳ್ಳು ಮಹಜರ್ ಸೃಷ್ಟಿಸಿರುತ್ತಾರೆ. ಈ ಎಲ್ಲಾ ಕಾರಣಗಳಿಂದ ಇಲಾಖಾ ವಿಚಾರಣೆಯನ್ನು ಕೈಬಿಡಬೇಕೆಂದು ಕೇಳಿಕೊಂಡಿರುತ್ತಾರೆ.

8. ತನಿಖಾ ಕಾಲದಲ್ಲಿ ಸಂಗ್ರಹಿಸಿದ ದಾಖಲೆಗಳನ್ನು ಹಾಗೂ ಸಾಕ್ಷ್ಯಾಧಾರಗಳನ್ನು ಪರಾಂಭರಿಸಲಾಗಿ, ಎದುರುದಾರರು ಮೇಲ್ಕಂಡಂತೆ ದುರ್ನಡತೆ ಎಸಗಿರುವುದು ಮೇಲ್ನೋಟದಲ್ಲಿ ಕಂಡುಬರುತ್ತದೆ. ತನಿಖಾ ಕಾಲದಲ್ಲಿ ಸಂಗ್ರಹಿಸಿದ ಸಾಕ್ಷ್ಯಾಧಾರಗಳನ್ನು ನಂಬದಿರಲು ಹಾಗೂ ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ ಬರೆದುಕೊಂಡ ನಿಲುವುಗಳನ್ನು ಒಪ್ಪಲು ಈ ಹಂತದಲ್ಲಿ ಬಲವಾದ ಹಾಗೂ ಸಮಂಜಸವಾದ ಆಧಾರಗಳಿರುವುದಿಲ್ಲ.

9. ಎದುರುದಾರರು ತಮ್ಮ ಕರ್ತವ್ಯದಲ್ಲಿ ಸಂಪೂರ್ಣ ನೀತಿ, ನಿಷ್ಠೆ ಹಾಗೂ ಶ್ರದ್ಧೆಯನ್ನು ಹೊಂದಿರದೆ ಮೇಲ್ಕಂಡಂತೆ ಭ್ರಷ್ಟಾಚಾರವೆಸಗಿ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಕ.ನಾ.ಸೇ. (ನಡತೆ) ನಿಯಮ, 1966, 3(1) (i) to (iv) ರ ಅನ್ವಯ ಶಿಸ್ತುಕ್ರಮಕ್ಕೆ ಒಳಪಡಲು ಬಾಧ್ಯರಾಗಿರುತ್ತಾರೆ.

10. ಆದ್ದರಿಂದ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು 1957, ನಿಯಮ 14(ಎ) ಅನ್ವಯ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಅನುಮತಿ ನೀಡಿ, ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ಅನ್ವಯ

ಪ್ರದತ್ತವಾದ ಅಧಿಕಾರದ ಅಡಿ ಸಕ್ಷಮ ಪ್ರಾಧಿಕಾರವಾದ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ. ಮುಂದುವರೆದು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(4) ಪ್ರಕಾರ ಶಿಸ್ತು ಪ್ರಾಧಿಕಾರವು ಈ ವರದಿಯ ಅನ್ವಯ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸುವ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ 3 ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ತಿಳಿಸುವುದು.

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.